| Form No.4 (Civil) Deposition Sheets (R.P.No.57) |
|---|

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 19/2023

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಶಂಕರ |
| ತಂದೆಯ ಹೆಸರು | : | ಹುಸೇನಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಯಲಸತ್ತಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 05-03-2025**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ಮೃತ ಸಿದಾರ್ಥ ನನ್ನ ಮಗ. ಆರೋಪಿತರ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ದಾಖಲೆಯಲ್ಲಿ ನನ್ನ ಹೆಬ್ಬಟ್ಟಿನ ಗುರುತು ಇದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ನಿ.ಪಿ.1ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ. ಪೊಲೀಸರು ಪುನಃ ನನ್ನನ್ನು ಕರೆಸಿರುವುದಿಲ್ಲ ಯಾವುದೇ ಪುರವಣಿ ಹೇಳಿಕೆ ಪಡೆದಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತಿದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

**ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ**

2. ಆರೋಪಿ ನಂ.2 ಮತ್ತು 3 ಹೊಟ್ಟೆ ಪಾಡಿಗಾಗಿ ದುಡಿಯಲು ಹೋಗಿದ್ದಾಗ ಆರೋಪಿತರ ದೂರದ ಸಂಬಂಧಿಯಾದ ಯಲ್ಲಸತ್ತಿ ಗ್ರಾಮದ ಮೃತ ಸಿದಾರ್ಥ ಈತನು ಆಗಾಗ ಆರೋಪಿತರ ಮನೆಗೆ ಹೋಗಿ ಬರುವದು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನಂ.2 ರವರು ಮನೆಯಲ್ಲಿ ಇಲ್ಲದ ಸಮಯದಲ್ಲಿ ಮಧ್ಯಾಹ್ನ ವೇಳೆಯಲ್ಲಿ ಮೃತ ಸಿದಾರ್ಥನು ಮತ್ತು 3 ನೇ ಆರೋಪಿ ಈಕೆಯು ಇವರಿಬ್ಬರೂ ಒಂದೇ ಕಡೆ ಮಲಗಿದ್ದನ್ನು ಆರೋಪಿ ನಂ.2 ಈತನು ನೋಡಿ ಮೃತ ಸಿದಾರ್ಥನಿಗೆ ಪದೇ ಪದೇ ನಮ್ಮ ಮನೆಗೆ ಯಾಕೆ ಬರುತ್ತಿ ಎಂದು ಪ್ರಶ್ನಿಸಿದಾಗ ಸುಮ್ಮನೆ ಬಂದಿದ್ದೇನೆ ಎಂದು ಹೇಳಿ ಹೋಗಿರುತ್ತಾನೆ ಅಂದರೆ ಸರಿಯಲ್ಲ. ಆರೋಪಿ ನಂ. 2 ಈತನು ಅನುಮಾನ ಪಟ್ಟು ನಂತರ 3 ನೇ ಆರೋಪಿ ಕರೆದುಕೊಂಡು ಕಡೆಚೂರ ಗ್ರಾಮಕ್ಕೆ ಹೋಗಿ ಕೂಲಿ ನಾಲಿ ಮಾಡುತ್ತಾ ಜೀವನ ಸಾಗಿಸುತ್ತಿದ್ದಾಗ ಮೃತ ಸಿದಾರ್ಥ ಈತನು ಸಹ ಬೆಂಗಳೂರಿನಿಂದ ಕಡೆಚೂರ ಗ್ರಾಮಕ್ಕೆ ಬಂದು ದಿಃ 04.09.2022 ರಂದು ಬೆಳಿಗ್ಗೆ 9-15 ಗಂಟೆಗೆ ಮೃತ ಸಿದಾರ್ಥ ಈತನು ಕಡೆಚೂರ ಗ್ರಾಮದಲ್ಲಿದ್ದ ಆರೋಪಿ ನಂ.3 ಶ್ರೀದೇವಿ ಈಕೆಯ ಕೈ ಹಿಡಿದು ನಡೆ ನನ್ನ ಸಂಗಡ ಅಂತಾ ಎಳೆದಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನಂ. 2 ಮತ್ತು 3 ಇವರು ಮೃತ ಸಿದಾರ್ಥನಿಗೆ ಈ ರೀತಿ ಮಾಡುವದು ಸರಿಯಲ್ಲ ಎಂದು ಹೇಳಿ ಬಿಡಿಸಿಕೊಳ್ಳಲು ಪ್ರಯತ್ನಿಸಿದ್ದರೂ ಕೂಡಾ ಮೃತ ಸಿದಾರ್ಥನು ಬಿಟ್ಟಿರುವುದಿಲ್ಲ. 2 ನೇ ಆರೋಪಿ ಈತನು ಕೆಬ್ಬಿಣದ ಕೊಡಲಿಯಿಂದ ಮೃತ ಸಿದಾರ್ಥನ ತಲೆಯ ಹಿಂಬಾಕ್ಕೆ ಹೊಡೆದಿದ್ದು ಮತ್ತು 1 ನೇ ಆರೋಪಿತನು ಕಬ್ಬಿಣದ ಸುತ್ತಿಗೆಯಿಂದ ಮೃತ ಸಿದಾರ್ಥನ ಹಣೆಗೆ ಹೊಡೆದು ಮೃತ ಸಿದಾರ್ಥನ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಮೃತ ಸಿದಾರ್ಥನನ್ನು ಮುಗಿಸಿದರೆ ತಂಟೆಗೆ ಬರುವುದಿಲ್ಲ ಅಂತಾ ಒಳಸಂಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಮೃತ ಸಿದಾರ್ಥನ ಕೊಲೆ ಮಾಡುವದಕ್ಕಾಗಿ 3 ಮತ್ತು 4 ರವರು ಈ ಮಗನಿಗೆ ಮುಗಿಸಿ ಬಿಡಿರಿ ಬಿಡಬೇಡಿ ನಾವು ಮನೆಯ ಹೊರಗಡೆ ಕಾಯುತ್ತಿರುತ್ತೇವೆ ಎಂದು ಹೇಳಿ ಸದರಿ ಕೃತ್ಯಕ್ಕೆ 3 ಮತ್ತು 4 ನೇ ಆರೋಪಿತರು ದುಷ್ಪ್ರೇರಣೆ ನೀಡಿರತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಮೃತ ಸಿದಾರ್ಥನ ದೇಹವನ್ನು 1 ನೇ ಆರೋಪಿತನ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಕಡೆಚೂರ ಗ್ರಾಮದ ಸಿಮಾಂತರದ ಯಾದಗಿರಿ - ರಾಯಚೂರ ಹಳೆ ರೋಡ ಬ್ರಿಡ್ಜನ ವರೆಗೆ ಸಾಗಿಸಿ ಬ್ರಿಡ್ಜನ ಪಕ್ಕಕ್ಕೆ ತಗ್ಗಿನಲ್ಲಿ ಬಿಸಾಕಿರುತ್ತಾರೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರು ಮೃತ ಸಿದಾರ್ಥನ ಕಲೆ ಮಾಡಿದ ಸ್ಥಳದಲ್ಲಿ ಬಿದ್ದ ರಕ್ತದ ಕಲೆಗಳನ್ನು ನೀರಾಕಿ ತೊಳೆದು ಸಾಕ್ಷಿ ನಾಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ 07.09.2022 ರಂದು ಪೊಲೀಸರ ಮುಂದೆ ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರ ಮುಂದೆ ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು.

**೩.** ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎನ್.ಎಮ್.ಜಿ. ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 19/2023

ಪ್ರಾ.ಸಾ. 2 ಚಾ.ಸಾ. 3

| | | |
|---|---|---|
| ಹೆಸರು | : | ಅಂಬ್ರೇಶ |
| ತಂದೆಯ ಹೆಸರು | : | ಲಕ್ಷ್ಮಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ | : | ಯಲಸತ್ತಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 05-03-2025**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ಮೃತ ಸಿದಾರ್ಥ ನನ್ನ ಗೆಳೆಯ. ಚಾಸಾ-2 ರಮೇಶ ಈತನ ಪರಿಚಯ ಇದೆ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಸಾಕ್ಷಿಗೆ ಈಗ ಶವ ಪಂಚನಾಮೆ ತೋರಿಸುತ್ತಿದ್ದು ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ. ಸಾಕ್ಷಿಗೆ 6 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.4 ಮತ್ತು 9 ಎಂದು ಗುರುತಿಸಲಾಯಿತು.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತಿದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

**ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ**

2. ದಿಃ 05.09.2022 ರಂದು ಬೆಳಿಗ್ಗೆ 9-00 ರಿಂದ 10-30 ಗಂಟೆಯ ವರೆಗೆ ನನ್ನನ್ನು ಹಾಗೂ ಚಾಸಾ-2 ರಮೇಶ ಈತನನ್ನು ಸೈದಾಪೂರ ಸರಕಾರಿ ಸ್ವತ್ರೆಯ ಶವಗಾರ ಕೋಣೆಯಲ್ಲಿ ಬರಮಾಡಿಕೊಂಡು ಮೃತ ಸಿದಾರ್ಥ ಈತನ ಶವ ಪಂಚನಾಮೆಯನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.3 ರಂತೆ ಮಾಡಿ ಆ ಕಾಲಕ್ಕೆ ನಿ.ಪಿ.4 ರಿಂದ 9 ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎನ್.ಎಮ್.ಜಿ. ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.